ಪರವಾನಗಿ ಪತ್ರ

ಪರಿಷ್ಕೃತ ನಕ್ಷೆ

ವಸತಿ ಸಮುಚ್ಚಯ ಕಟ್ಟಡ ನಿರ್ಮಾಣಕ್ಕಾಗಿ ಮಾತ್ರ

# ಬೆಂಗಳೂರು ಮಹಾನಗರ ಪಾಲಿಕೆ

BBMP/Addl. Com/MDP/LP/0530/2012-13

BF+GF+16 upper floors and Part of 17th floor only.

**№ 63672**

ಸಿಟಿ ಮಜಕೂರ್ ಮಹದೇವಪುರ ಉಪ ವಲಯ ಡಿವಿಜನ್ ಬೆಂಗಳೂರು ನೇ

ಶ್ರೀ. ನರಸಿಂಹ ಮೂರ್ತಿ ಮತ್ತು ಬಿ.ಕೆ. ರಾಮ ಪ್ರಸಾದ (ಮಾಲೀಕರು)

ನಂಬರು ಮನೆಗೆ ಮಾಲೀಕ/ವಾಸಸ್ಥರಾದ M/s Value Design Build Pvt. Ltd., (ಜಿಪಿಎದಾರರು)

ಖಾತಾ ಸಂಖ್ಯೆ 570, ಸರ್ವೆ ನಂ-136, ಮು.ನಂ.15, ಗುಂಜೂರು.

ನೀವು ವರ್ತೂರು, ವಾರ್ಡ್ ನಂ.149, ಬೆಂಗಳೂರು. ನೇ ನಂಬರಿನಲ್ಲಿ ಕಟ್ಟಡ ಕಟ್ಟಬೇಕೆಂಬ ವಿಷಯ

ಕುರಿತು ಬರೆದುಕೊಂಡ ತಾರೀಖು 03-02-2014. ನಲಿ ಕೊಟ್ಟ ಅರ್ಜಿ

ಮಾನ್ಯ ಆಯುಕ್ತರು ದಿ:09/5/2014 ರಂದು ನಕ್ಷೆ ಮಂಜೂರಾತಿಗೆ ಅನುಮೋದಿಸಿರುತ್ತಾರೆ. ಸದರಿ ನಕ್ಷೆಯ ಕಾಲಮಿತಿಯು ಎರಡು ವರ್ಷಗಳು ಮಾತ್ರ ದಿ:19/05/2016ಕ್ಕೆ ಅಂತ್ಯಗೊಳ್ಳುವುದು.

ಜಾಹೀರಾಯಿತು. ಈ ಕೆಳಕಂಡ ನಿಗಧಿತ ಶುಲ್ಕಗಳನ್ನು ಈ ಕಛೇರಿಯ ಚಲನ್ ಸಂಖ್ಯೆ:TP/JDTP(N&T)/01/14-15/May/0029 ದಿ:14/5/14 ರಂದು ಪಾವತಿಸಿರುತ್ತಾರೆ. (1) ಪರವಾನಗಿ ಶುಲ್ಕ ರೂ.590785=00 (2) ಉತ್ತಮಿಕೆ ಶುಲ್ಕ ರೂ.29539=00 (3) ಭದ್ರತಾ ಠೇವಣಿ ರೂ.1476963=00 (4) ಆಶ್ರಯ ಶುಲ್ಕ ರೂ.1181709=00 (5) ನಕ್ಷೆ ಪ್ರತಿ ಶುಲ್ಕ ರೂ.86000=00 (6) ಲೇಬರ್ ಸೆಸ್ ಶೇ.1ರಷ್ಟು ಲೆಕ್ಕದ ಮೊತ್ತ ರೂ.15898=00 (7) Rounding off ರೂ.105=00 (8) ಒಟ್ಟು ಮೊತ್ತ ರೂ.33,81,000=00 [ಡಿ.ಡಿ. ಸಂಖ್ಯೆ 024154 ದಿ:14/5/14, HDFC Bank Ltd., Richmond Road Branch]

ಸೂಚನೆ :- ಇದರ ಹಿಂಭಾಗದಲ್ಲಿ ಅಡಕವಾಗಿರುವ ಷರತ್ತುಗಳನ್ನು ಗಮನಿಸಿ ಅದಕ್ಕೆ ಒಳಪಟ್ಟು ನಡೆದುಕೊಳ್ಳಬೇಕು. ಅವುಗಳಲ್ಲಿ ಯಾವುದೇ ಒಂದು ಷರತ್ತುಗಳನ್ನು ಉಲ್ಲಂಘಿಸಿರುವುದಾಗಿ ಕಂಡುಬಂದರೆ, ಬೆಂಗಳೂರು ಮಹಾನಗರ ಪಾಲಿಕೆ ಆಕ್ಟಿನ 462ನೇ ನಿಬಂಧನೆ ಮೇಲೆ ಕ್ರಮ ಜರುಗಿಸಲಾಗುವುದು.

ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗಾಗಿ ಲೇಬರ್ ಸೆಸ್ ರೂ.15,74,000/-ಗಳನ್ನು ಡಿ.ಡಿ. ಮುಖಾಂತರ ಪಾವತಿಸಿ ಸಲ್ಲಿಸಿರುತ್ತಾರೆ. [ಡಿ.ಡಿ. ಸಂಖ್ಯೆ: 024155 ದಿ:14/5/14, HDFC Bank Ltd., Richmond Road Branch]

ತಾರೀಖು 20 ನೇ 05 ಮಾಹೆ 2014 ಇಸವಿ

Joint Director of Town Planning (North)
Bruhat Bangalore Mahanagara Palike
Bangalore.

20/05/14

# ಷರತ್ತುಗಳು

1. ಲೈಸೆನ್ಸು ಪಡೆದ ಎರಡು ವರ್ಷದೊಳಗಾಗಿ ಕೆಲಸವನ್ನು ಪೂರೈಸಿ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
2. ಮಂಜೂರಾದ ಪ್ಲಾನಿಗೆ ವಿರೋಧವಾದ ಯಾವ ಕಾಮಗಾರಿಯನ್ನೂ ನಡೆಸಕೂಡದು.
3. ಕಾರ್ಪೊರೇಷನ್ ಅಧಿಕಾರಿಗಳು ಅಪೇಕ್ಷಿಸಿದ ವೇಳೆ ತೋರಿಸಲು, ಲೈಸೆನ್ಸು ಮತ್ತು ಪ್ಲಾನು ಸಹಾ ಕಟ್ಟುವ ಸ್ಥಳದಲ್ಲಿ ಸರ್ವದಾ ಸಿದ್ಧವಾಗಿರಬೇಕು.
4. ಕಟ್ಟಡದ ನಿವೇಶನದಲ್ಲಿ ಹಳ್ಳ ತೆಗೆಯಕೂಡದು.
5. ಪಾಯಿಖಾನೆ ಗೊತ್ತುಮಾಡಿರುವ ಸ್ಥಳವನ್ನು ಕಾರ್ಪೊರೇಷನ್ ರೆಗ್ಯುಲೇಷನ್ ಅನುಸರಿಸಿ ಪ್ರತಿದಿನವೂ ಪಾಕ್ ಮಾಡಲು ತಕ್ಕ ಏರ್ಪಾಡು ಮಾಡಬೇಕು. ಪಾಯಿಖಾನೆಯ ನೆಲಕ್ಕೂ ಮತ್ತು ಸುತ್ತಲೂ ಕಲ್ಲು ಕಟ್ಟಿಸಿ ನೀರು ಭೂಮಿಗೆ ಇಳಿಯದಂತೆ ಸಿಮೆಂಟಿನಿಂದ ಸಂದುಗಾರೆ ಮಾಡಿಸತಕ್ಕದ್ದು.
6. ಮಾಳಿಗೆ ನೀರು ಕಾರ್ಪೊರೇಷನ್ ಜಮೀನು ಅಥವಾ ರಸ್ತೆ ಮೇಲೆ ಬೀಳದಂತೆ ಮೇಲಿನಿಂದ ಕೆಳಗಿನವರೆಗೂ ಗೋಡೆಗೆ ಲಗತ್ತಾಗಿ ಗಟ್ಟಿ ದಿಂಡನಿಂದ ತಗಡಿನಿಂದ ಯಾ ವಂಪಾದ ದೋಣಿಗಳನ್ನಿಟ್ಟು ಮೊಹರಿಗೆ ಸರಿಯಾಗಿ ಬಿಡತಕ್ಕದ್ದು.
7. ನೀವು ಕಟ್ಟತಕ್ಕ ಕಟ್ಟಡದ ಗೋಡೆಯ ಅಸ್ತಿಭಾರವು ರಸ್ತೆ ಪಕ್ಕದಲ್ಲಿರುವ ಮೊಹರಿಯಿಂದ ಒಂದೂವರೆ ಅಡಿಗಿಂತ ಕಮ್ಮಿ ದೂರದಲ್ಲಿರಕೂಡದು.
8. ಈ ಲೈಸೆನ್ಸಿನಿಂದ ನೀವು ಗೈರ್ ಮಾಮೂಲು ದೋಣಿ ಅಥವಾ ಬಚ್ಚಲು ನೀರು ತಿರುಗಿಸುವುದಕ್ಕೂ ಹೊಸದಾಗಿ ದಾರಿ ಮಾಡಿ ಕೊಳ್ಳುವುದಕ್ಕೂ ಬಾಗಿಲು ಕಿಟಕಿಗಳನ್ನು ಇಡಿಸುವುದಕ್ಕೂ ಅಥವಾ ಜಮೀನು ಸೇರಿಸಿಕೊಳ್ಳುವುದಕ್ಕೂ ಅಪ್ಪಣೆ ಪಡೆದಿರುವುದಿಲ್ಲ.
9. ಕಟ್ಟಡದ ಸಾಮಾನುಗಳನ್ನು ಸರ್ಕಾರಿ ರಸ್ತೆ, ಮೊಹರಿ ಯ ಕಾರ್ಪೊರೇಷನ್ ಜಮಿನಿನಲ್ಲಿ ಹಾಕಿಸಕೂಡದು.
10. ಕಟ್ಟಡದ ನಿವೇಶನದಲ್ಲಿ ಲಂಟಾಣ, ಕತ್ತಾಳಿ, ಬೊಂತೆಕತ್ತಾಳಿ ಇತರ ಆಕ್ಷೇಪಕರವಾದ ಗಿಡಗಳ ಬೇಲಿಯನ್ನು ಅಥವಾ ಮುಳ್ಳು ತಂತಿಯ ಬೇಲಿಯನ್ನು ಹಾಕಿಸಕೂಡದು.
11. ಕಟ್ಟಡದ ಸೂರು ಯಾ ಲೋಮೆಗಳ ಕಿಟಕಿಗಳ ಮೇಲಿನ ಬಿಸಿಲ್ತಡಿಕೆ, ದೋಣಿಗಳು ಬೀದಿಯ ಮೊಹರಿಯಿಂದ ಮುಂದಕ್ಕೆ ಉಚ್ಚಾಯಿಸಿ ಬರಕೂಡದು.
12. ಲೈಸೆನ್ಸಿನಿಂದ ಕಟ್ಟತಕ್ಕ ನಿಮೇಶನಕ್ಕೆ ಲೈಸೆನ್ಸುದಾರರಿಗೆ ಇದಕ್ಕೆ ಮೊದಲು ಇಲ್ಲದ ಹಕ್ಕುದಾರಿ ಈಗ ಹೊಸದಾಗಿ ಉಂಟಾಗುವುದಿಲ್ಲ ಮತ್ತು ಇತರರಿಗೆ ಇರಬಹುದಾದ ಹಕ್ಕಿಗೆ ಯಾವ ಕುಂದಕವೂ ಉಂಟಾಗುವುದಿಲ್ಲ.
13. ಹೊಗೆ ಹೋಗಲು ಇಡತಕ್ಕ ಚಿಮಣಿಗಳು ಮಾಳಿಗೆ ಮಟ್ಟಕ್ಕಿಂತ 4 ಅಡಿ ಕಮ್ಮಿ ಇಲ್ಲದಂತೆ ಎತ್ತರಿಸಿ ಕಟ್ಟಬೇಕು.
14. ಮೆಟ್ಟಲುಗಳನ್ನು ಬೇಸುಮೆಂಟಿನಲ್ಲಿ ಇಟ್ಟುಕೊಳ್ಳಬೇಕೇ ಹೊರತು ಕಟ್ಟಡದಿಂದೀಚೆಗೆ ಕಾರ್ಪೊರೇಷನ್ ಜಮೀನಿನ ಮೇಲೆ ಅಥವಾ ಮೊಹರಿನ ಮೇಲೆ ಬರುವಂತೆ ಇರಕೂಡದು.
15. ಕಿಟಕಿಗಳು, ಮನೆಗಳ ಅಥವಾ ಬೇಲಿಗಳ ಬಾಗಿಲುಗಳು ಒಳಭಾಗಕ್ಕೆ ತೆರೆಯುವಂತೆ ಇಡಿಸಬೇಕಲ್ಲದೆ ಕಾರ್ಪೊರೇಷನ್ ಜಾಗದ ಮೇಲೆ ಬರುವಂತೆ ಇಡಿಸಕೂಡದು.
16. ಗೋಡೆಗಳನ್ನು ಪೂರ್ತ ಮಣ್ಣಿನಿಂದ ಕಟ್ಟಿಸಕೂಡದು.
17. ಕಟ್ಟಡಗಳನ್ನು ಪೂರೈಸಿದ ಒಂದು ತಿಂಗಳೊಳಗಾಗಿ ಕಾರ್ಪೊರೇಷನ್ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
18. ಮೇಲ್ಕಂಡ ಷರತ್ತುಗಳಿಗೂ ಮತ್ತು ಬೈಲಾಗಳಲ್ಲಿ ನಮೂದಿಸಿರುವ ಷರತ್ತುಗಳಿಗೂ ವಿರೋಧವಾಗಿ ನಡೆದಲ್ಲಿ ನಿಮ್ಮನ್ನು ಕಾರ್ಪೊರೇಷನ್ ಆಕ್ಟಿನ 381ನೇ ಇಲ್ಲವೇ 462ನೇ ನಿಬಂಧನೆಯಂತೆಯಾಗಲೀ ಅಥವಾ ಇವೆರಡು ನಿಬಂಧನೆಗಳಂತೆಯಾಗಲೀ ಶಿಕ್ಷೆಗೆ ಗುರಿಪಡಿಸಲಾಗುವುದು.